62

**ಶ್ರೀ ಸಿ.ಟಿ.ರವಿ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು, ಇವರ ನಿಯಮ 330 ರಡಿ ಗಮನ ಸೆಳೆಯುವ ಸೂಚನೆಗೆ ಮಾಹಿತಿ.**

**ವಿಷಯ:**

ಹಾಸನ ಹಾಗೂ ಇತರೆ ಜಿಲ್ಲೆಗಳಲ್ಲಿ ಮೆಕ್ಕೆಜೋಳ ಬೀಜವನ್ನು ಸರ್ಕಾರದ ಲೋಗೋ ಬಳಸಿ ಸರಿಯಾದ ರೀತಿಯಲ್ಲಿ ಬೀಜವನ್ನು ಮಾರಾಟ ಮಾಡದೆ, ಖಾಸಗಿ ಹೈಟೆಕ್ ಕಂಪನಿಯವರ ಪ್ರಚಾರದಿಂದ ನಕಲಿ ಬೀಜವನ್ನು ಹೆಚ್ಚು ವಿತರಣೆ ಮಾಡಲಾಗಿದೆ. ಕೃಷಿ ಇಲಾಖೆಯ ಮುಖಾಂತರ ಮೆಕ್ಕೆಜೋಳ ನೀಡದೆ, ಖಾಸಗಿ ಏಜೆಂಟ್ ಗಳ ಮುಖಾಂತರ ವಿತರಣೆ ಮಾಡಲಾಗಿದೆ. ಇದನ್ನು ಮನಗಂಡ ರೈತರು ಜಂಟಿ ನಿರ್ದೇಶಕ ಜೊತೆ ಸಭೆ ನಡೆಸಿ ಕೃಷಿ ಇಲಾಖೆಯ ಮುಖಾಂತರ ಮಾರಾಟ ಮಾಡಬೇಕು ಆಗ ಮಾತ್ರ ನಮಗೆ ನಿಖರವಾದ ರೀತಿಯಲ್ಲಿ ಮೆಕ್ಕೆಜೋಳ ಸಿಗುತ್ತದೆ ಎಂದು ಹೇಳಿದರು ಸಾಧ್ಯವಾಗಿಲ್ಲ.

ಈ ನಕಲಿ ಬೀಜದಿಂದ ಬಿಳಿ ಸುಳಿ ರೋಗ ಬರುತ್ತದೆ ಎಂದು ಮೊದಲೇ ಗೊತ್ತಿದ್ದರೂ ಯಾವುದೇ ಮುಂಜಾಗ್ರತ ಕ್ರಮ ತೆಗೆದುಕೊಂಡಿರುವುದಿಲ್ಲ. ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜ ಮಾಡಿರುವ ಮೆಕ್ಕೆಜೋಳ ಬೆಳೆಗೆ ಬಿಳಿಸುಳಿ ಅಥವಾ ಬೂಜುರೋಗ ಕಂಡು ಬಂದಿದೆ. ಈ ಬಾರಿ ಮುಂಗಾರಿನಲ್ಲಿ ವಾಡಿಕೆ ಗಿಂತ ಅತಿ ಹೆಚ್ಚು ಮಳೆಯಾಗಿದ್ದು ವಾತಾವರಣದಲ್ಲಿ ತೇವಾಂಶ ಹೆಚ್ಚಾಗಿ ತಾಪಮಾನ ಇಳಿಕೆಯಾದ ಕಾರಣ ಬೂಜು ರೋಗವು ಪೆರಾನೋಸ್ಕ್ಲಿ ರೋಸ್ಪಾರಾ ಎಂಬ ಶಿಲೀಂದ್ರದಿಂದ ಬರುವ ರೋಗವಾಗಿದೆ. ಈ ಸೋಂಕು ಹೆಚ್ಚಾದರೆ ಶೇಕಡ 70 ರಷ್ಟು ಇಳುವರಿ ಕುಂಠಿತವಾಗಿರುತ್ತದೆ.

ತೆಲಂಗಾಣದ ಮುಲುಗು ಜಿಲ್ಲೆಯ 671 ಎಕರೆ ಮೆಕ್ಕೆಜೋಳ ರೈತರಿಗೆ ತುಂಬಾ ನಷ್ಟ ಆದ ಕಾರಣದಿಂದ ಖಾಸಗಿ ಕಂಪನಿ ಮತ್ತು ಸರ್ಕಾರದಿಂದ ಅವರಿಗೆ ಪರಿಹಾರ ನೀಡಲಾಗಿದೆ. ವಾಜೇಡು ವೆಂಕಟಪುರ ಮತ್ತು ಕನ್ನಗುಡೇ ಮಂಡಲಗಳಲ್ಲಿ ಹರಡಿರುವ 1521 ಎಕರೆಗಳಲ್ಲಿ ರೈತರಿಗೆ ನಷ್ಟ ಆದಕಾರಣದಿಂದ ಒಟ್ಟು 3.80 ಕೋಟಿ ರೂ ಚೆಕ್‌ಗಳನ್ನು ಒದಗಿಸಲಾಗಿದೆ ಇದರಿಂದ ಎಕರೆಗೆ ರೂ. 60 ಸಾವಿರ ರಿಂದ ರೂ. 1.25 ಲಕ್ಷದ ಪರಿಹಾರ ಸಿಕ್ಕಿದೆ ಈ ರೀತಿಯಲ್ಲಿ ನಮ್ಮ ರಾಜ್ಯ ಸರ್ಕಾರದಲ್ಲಿ ರೈತರ ಕಲ್ಯಾಣಕ್ಕಾಗಿ ರೂ. 1,050 ಕೋಟಿ ಮೀಸಲಿಡಲಾಗಿದೆ. ಈಗ ಪರಿಹಾರವನ್ನು ನೀಡಿ ಹಾಗೂ ಈಗಾಗಲೇ ರೈತ ಸಂಘದ ನೇತೃತ್ವದಲ್ಲಿ ಸಭೆ ನಡೆಸಿ ನಕಲಿ ಬೀಜವೆಂದು ಕಂಡು ಬಂದಿರುವ ಹಿನ್ನಲೆಯಲ್ಲಿ ಮೊಕದಮ್ಮೆ ದಾಖಲಿಸಿರುತ್ತಾರೆ. ಆದರ ತನಿಖೆಯು ನಿಷ್ಕಲ್ಮಶವಾಗಿ ವಿಶೇಷ ತನಿಕಾಧಿಕಾರಿಗಳ ನೇತೃತ್ವದಲ್ಲಿ ನಡೆಯಬೇಕೆಂದು ಆಗ್ರಹಿಸುತ್ತೇನೆ.

**ಉತ್ತರ:**

ರಾಜ್ಯದ ಹಲವೆಡೆ ಬೀಜೋಪಚಾರ ಕೈಗೊಳ್ಳದೆ ಮುಸುಕಿನ ಜೋಳ ಬಿತ್ತನೆ ಕೈಗೊಂಡಿರುವುದು, ಮೇವಿನ ಉದ್ದೇಶಕ್ಕಾಗಿ ಬೆಳೆಯುವ ಮುಸುಕಿನ ಜೋಳದ ಬಿತ್ತನೆಗೆ ಕಳೆದ ಬಾರಿಯ ಬೆಳೆಯ ಬೀಜಗಳನ್ನು ಉಪಯೋಗಿಸಿರುವುದು, ಬೆಳೆ ಪರಿವರ್ತನೆ ಮಾಡದೆ ಪ್ರತಿ ವರ್ಷ, ಪ್ರತಿ ಹಂಗಾಮಿನಲ್ಲೂ ಮುಸುಕಿನ ಜೋಳ ಬೆಳೆಯನ್ನೇ ಬೆಳೆಯುತ್ತಿರುವುದರಿಂದ ಹಾಗೂ ಪ್ರಸಕ್ತ ಸಾಲಿನಲ್ಲಿ ವಾತಾವರಣದಲ್ಲಿನ ಹೆಚ್ಚಿನ ಆರ್ದ್ರತೆ, ಮೋಡ ಕವಿದ ವಾತಾವರಣ ಹಾಗೂ ಹೆಚ್ಚಿನ

ಮಳೆಯಿಂದಾಗಿ ಬಿಳಿ ಸುಳಿ/ ಬೂಜು ರೋಗ ಬಾಧೆ ಹಾಸನ ಜಿಲ್ಲೆಯಲ್ಲಿ ಕಂಡುಬಂದಿರುತ್ತದೆ ರಾಜ್ಯದಲ್ಲಿ ಸುಮಾರು 17.32 ಲಕ್ಷ ಹೆ. ಪ್ರದೇಶದಲ್ಲಿ ಮುಸುಕಿನ ಜೋಳ ಬೆಳೆಯು ಬಿತ್ತನೆಯಾಗಿರುತ್ತದೆ. ಹಾಸನ ಜಿಲ್ಲೆಯಲ್ಲಿ ಒಟ್ಟು 95,360 ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಬಿತ್ತನೆಯಾಗಿದ್ದು, 12,595 ಹೆಕ್ಟೇರ್ ಪ್ರದೇಶದಲ್ಲಿ ಬಿಳಿ ಸುಳಿ/ ಬೂಜು ರೋಗ ಕಂಡುಬಂದಿರುತ್ತದೆ.

2025-26 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಹಾಸನ ಜಿಲ್ಲೆಯಲ್ಲಿ ಮುಸುಕಿನ ಜೋಳ ಬಿತ್ತನೆ ಬೀಜ ವಿತರಣೆಯನ್ನು ಸರ್ಕಾರದ ಸಹಾಯಧನದಡಿ ರೈತ ಸಂಪರ್ಕ ಕೇಂದ್ರಗಳ ಮುಖೇನ ಹಾಗೂ ಅಧಿಕೃತ ಪರವಾನಗಿ ಹೊಂದಿರುವ ಖಾಸಗಿ ಬಿತ್ತನೆ ಬೀಜ ಮಾರಾಟಗಾರರ ಮೂಲಕ ರೈತರಿಗೆ ವಿತರಣೆ ಮಾಡಲಾಗಿರುತ್ತದೆ. 2024-25ನೇ ಸಾಲಿನಲ್ಲಿ ಇಲಾಖೆ ಮುಖೇನ 1764 ಕ್ವಿಂಟಾಲ್ ಹಾಗೂ 2025-26ನೇ ಸಾಲಿನಲ್ಲಿ ದಿನಾಂಕ: 14-08-2025 ರವರೆಗೆ 1346 ಕ್ವಿಂಟಾಲ್ ಮುಸುಕಿನ ಜೋಳ ಬಿತ್ತನೆ ಬೀಜ ವಿತರಣೆ ಮಾಡಿದ್ದು, ಜಿಲ್ಲೆಯ ಒಟ್ಟು ಬೇಡಿಕೆ ಇರುವ ಸರಾಸರಿ 20,000 ಕ್ವಿಂಟಾಲ್ ಬಿತ್ತನೆ ಬೀಜದಲ್ಲಿ ಶೇ. 80 ರಿಂದ 85 ರಷ್ಟು ಬಿತ್ತನೆ ಬೀಜವನ್ನು ಖಾಸಗಿ ಬಿತ್ತನೆ ಬೀಜ ಮಾರಾಟಗಾರರ ಮುಖೇನ ರೈತರು ಖರೀದಿಸುತ್ತಾರೆ. ಅದರಂತೆ ಹಾಸನ ಜಿಲ್ಲೆಗೆ ಸುಮಾರು 12 ಪ್ರಮುಖ ಕಂಪನಿಗಳ ಬಿತ್ತನೆ ಬೀಜಗಳನ್ನು ರೈತರು ವಿತರಕರ ಮುಖಾಂತರ ಖರೀದಿ ಮಾಡಿರುತ್ತಾರೆ. ಪ್ರಮುಖ ಕಂಪನಿಗಳಲ್ಲಿ ಹೈಟೆಕ್ ಕಂಪನಿಯು ಸಹ ಇರುತ್ತದೆ. ಹೈಟೆಕ್ ಕಂಪನಿಯ ಹೆಚ್.ಟಿ.ಎಂ.ಹೆಚ್-5109 ಹೈಬ್ರಿಡ್ ಮುಸುಕಿನ ಜೋಳವು ಹಾಸನ ಜಿಲ್ಲೆಯಲ್ಲಿ ಸುಮಾರು 4-5 ವರ್ಷಗಳಿಂದ ಪ್ರಚಲಿತದಲ್ಲಿದ್ದು ಹಾಗೂ ಸದರಿ ಹೈಬ್ರಿಡ್ ಬಿತ್ತನೆ ಬೀಜವು ಕೃಷಿ ಇಲಾಖೆಯ ಬಿತ್ತನೆ ಬೀಜ ದರಕರಾರಿನಲ್ಲಿ ಸೇರ್ಪಡೆಗೊಳ್ಳದ ಕಾರಣ ಇಲಾಖೆಯಿಂದ ಸದರಿ ತಳಿಯನ್ನು ವಿತರಿಸಲು ಅವಕಾಶವಿಲ್ಲವಾದ್ದರಿಂದ, ಬಹುತೇಕ ರೈತರು ಸದರಿ ಬಿತ್ತನೆ ಬೀಜವನ್ನು ಖಾಸಗಿ ಬಿತ್ತನೆ ಬೀಜ ಮಾರಾಟಗಾರರಿಂದ ಖರೀದಿಸುತ್ತಾರೆ.

ಮುಂದುವರೆದು, ಪ್ರಸಕ್ತ 2025-26 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮುಸುಕಿನ ಜೋಳ ಬೆಳೆಗೆ ಕಾಣಿಸಿಕೊಂಡಿರುವ ಬಿಳಿಸುಳಿ ರೋಗ ಬಾಧೆಯು *Peronosclerospora sorghi* ಎಂಬ ಶಿಲೀಂದ್ರದಿಂದ ಹರಡುತ್ತಿದ್ದು ಪೂರಕ ವಾತಾವರಣವಾದ ಹೆಚ್ಚಿನ ಮಳೆ ಹಾಗೂ ತಂಪಾದ ವಾತಾವರಣ ರೋಗ ಉಲ್ಬಣಕ್ಕೆ ಕಾರಣವಾಗಿರುತ್ತದೆ ಎಂದು ವಿಜ್ಞಾನಿಗಳ ತಂಡ ವರದಿಯಲ್ಲಿ ತಿಳಿಸಿರುತ್ತಾರೆ.

ಕೃಷಿ ಇಲಾಖೆ ವತಿಯಿಂದ ಬೂಜು ರೋಗ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಜಿಲ್ಲಾದ್ಯಂತ ರೈತರಿಗೆ ವ್ಯಾಪಕ ಪ್ರಚಾರವನ್ನು (ರೇಡಿಯೋ, ಪತ್ರಿಕೆ, ಕರ ಪತ್ರಗಳ ಮೂಲಕ) ಕೈಗೊಳ್ಳಲಾಗಿರುತ್ತದೆ. ಆದರೆ, ಕೃಷಿ ಇಲಾಖೆಯ ಪ್ರಕಟಣೆಯಲ್ಲಿ ಮುಸುಕಿನ ಜೋಳ ಬೆಳೆಯಲ್ಲಿ ಕಂಡುಬರುವ ಬಿಳಿ ಸುಳಿ ರೋಗದ ಬಾಧೆಗೆ ಹತೋಟಿ ಕ್ರಮಗಳು ಎಂಬ ಶೀರ್ಷಿಕೆಯಲ್ಲಿ ರೋಗ ನಿರ್ವಹಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ/ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ. ಇದೇ ಸರ್ಕಾರದ ಕರಪತ್ರದ ಪ್ರಕಟಣೆಯಲ್ಲಿ "ಹವಾಮಾನ ಬದಲಾವಣೆಗೆ ಬರುವ ರೋಗಗಳಿಗೆ ಅಂಗಡಿಯವರಾಗಲಿ, ಯಾವುದೇ ಕಂಪನಿಯವರಾಗಲಿ ಜವಾಬ್ದಾರರಾಗಿರುವುದಿಲ್ಲ" ಎಂದು ಮುದ್ರಿಸಿ ಸರ್ಕಾರದ ಕರಪತ್ರವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ವರದಿಯಾದ ಹಿನ್ನಲೆ ಹಾಗೂ ವಿಜ್ಞಾನಿಗಳ ವರದಿಯಲ್ಲಿ ರೈತರಿಗೆ ಹಾನಿಯಾಗಿರುವ ಬಗ್ಗೆ ತಿಳಿಸಿರುವ ಹಿನ್ನಲೆಯಲ್ಲಿ ದಿನಾಂಕ:19.07.2025 ರಂದು ಜಿಲ್ಲಾಧಿಕಾರಿಗಳು, ಹಾಸನ ರವರ ಅಧ್ಯಕ್ಷತೆಯಲ್ಲಿ ಆಯೋಜಿಸಿದ ಸಭೆಯಲ್ಲಿ ಬೆಳೆ ಹಾನಿಗೆ

ಕಾರಣರಾದ ಎಲ್ಲಾ ಬಿತ್ತನೆ ಬೀಜ ಕಂಪನಿಯವರ ಮೇಲೆ ಮೊಕದ್ದಮೆ ದಾಖಲಿಸಲು ನಿರ್ಣಯಿಸಿ ದಿನಾಂಕ: 31.07.2025 ರಂದು 20 ಬೀಜ ವಿತರಣೆ ಸಂಸ್ಥೆಗಳು ಹಾಗೂ ವಿತರಕರ ಮೇಲೆ ಎಫ್.ಐ.ಆರ್ ದಾಖಲಿಸಲಾಗಿದೆ.

1. ದಿನಾಂಕ: 07.07.2025 ರಂದು ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ, ಹಾಸನ ಸಂಘದವರು ಜಂಟಿ ಕೃಷಿ ನಿರ್ದೇಶಕರ ಕಛೇರಿ, ಹಾಸನ ಆವರಣದಲ್ಲಿ ನಡೆದ ಪ್ರತಿಭಟನೆಯಲ್ಲಿಯೂ, ಕೃಷಿ ಇಲಾಖೆ ಹೆಸರಿನಲ್ಲಿ ಕರ ಪತ್ರ ತಪ್ಪು ಮಾಹಿತಿ ಮುದ್ರಿಸಿ ಹಂಚಿರುವ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿರುತ್ತಾರೆ. ಅದರಂತೆ ಸದರಿ ದಿನದಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರೈತ ಮುಖಂಡರು ಹಾಗೂ ಇಲಾಖಾ ಅಧಿಕಾರಿಗಳ ಸಭೆ ನಡೆಸಿ ಜಿಲ್ಲಾಧಿಕಾರಿಗಳು ನೀಡಿದ ಸೂಚನೆಯನ್ವಯ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಸರ್ಕಾರ ಮತ್ತು ಇಲಾಖೆಯ ಚಿಹ್ನೆ ಬಳಸಿ ಕರಪತ್ರ ಮುದ್ರಿಸಿ ತಪ್ಪು ಮಾಹಿತಿಯನ್ನು ರೈತರಿಗೆ ನೀಡಿರುವ ಕಂಪನಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ದೇಶಿಸಲಾಗಿ, ಕೃಷಿ ಇಲಾಖೆ ವತಿಯಿಂದ ಹಾಸನ ಆರಕ್ಷಕ ಠಾಣೆಯಲ್ಲಿ ಸದರಿ ಪ್ರಕಟಣೆ ಮುಖೇನ ತಪ್ಪು ಮಾಹಿತಿ ನೀಡಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಎಫ್.ಐ.ಆರ್ ದಾಖಲಿಸಲಾಗಿದೆ.

2. ಮುಂದುವರೆದು ಬಿಳಿಸುಳಿ ರೋಗ ರೈತರ ತಾಕುಗಳಲ್ಲಿ ಕಾಣಿಸಿಕೊಂಡ ಕೂಡಲೇ ಕೃಷಿ ಕಾಲೇಜು, ಕಾರೆಕೆರೆ, ಹಾಸನ ಇಲ್ಲಿಗೆ ಪತ್ರ ಬರೆದು ವಿಜ್ಞಾನಿಗಳ ತಂಡವನ್ನು ನಿಯೋಜಿಸಿಕೊಡವಂತೆ ಕೋರಲಾಗಿ, ಸದರಿ ತಂಡವು ದಿನಾಂಕ: 08.06.2025 ರಂದು ರೈತರ ತಾಕುಗಳಿಗೆ ಭೇಟಿ ನೀಡಿರುತ್ತಾರೆ. ಸದರಿ ವರದಿಯಲ್ಲಿ ಹಾಸನ ಜಿಲ್ಲೆಯಲ್ಲಿ ಸುರಿದ ಅತಿಯಾದ ಮಳೆಯಿಂದ ರೋಗದ ಉಲ್ಬಣಕ್ಕೆ ಪೂರಕವಾದ ವಾತವರಣವಾದ ಉಷ್ಣಾಂಶ (21-23$^{0}$ ಸೆ) ಹಾಗೂ ವಾತಾವರಣದಲ್ಲಿನ ಹೆಚ್ಚಿನ ತೇವಾಂಶದಿಂದಾಗಿ ರೋಗ ಉಲ್ಬಣವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

3. ಅದೇ ರೀತಿ ದಿನಾಂಕ: 17.06.2025 ಹಾಗೂ 18.06.2025 ರಂದು ವಿ.ಸಿ. ಫಾರಂ, ಮಂಡ್ಯ ಹಾಗೂ 23.06.2025 ಮತ್ತು 24.06.2025 ಐ.ಸಿ.ಎ.ಆರ್-ಐ.ಐ.ಎಂ.ಆರ್ ಲೂಧಿಯಾನ ವಿಜ್ಞಾನಿಗಳ ಕೇಂದ್ರ ತಂಡ ಭೇಟಿ ನೀಡಿ ವರದಿಯನ್ನು ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

   - ಹಾಸನ ಜಿಲ್ಲೆಯಲ್ಲಿ ಏಪ್ರಿಲ್, ಮೇ ಮತ್ತು ಜೂನ್ ಮಾಹೆಯಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಿಂದಾಗಿ ತೇವಾಂಶದ ಸಾಂದ್ರತೆ ಹೆಚ್ಚಾಗಿ 5-6 ಗಂಟೆಗಳ ಕಾಲ ಮೋಡ ಕವಿದ ಕಾರಣ , ನಿರಂತರ ತುಂತುರು ಮಳೆ ಹಾಗೂ ಹಗಲು ಮತ್ತು ರಾತ್ರಿ ಉಷ್ಣಾಂಶದಲ್ಲಿ ವಾಡಿಕೆಗಿಂತ ಕಡಿಮೆಯಾಗಿದ್ದರಿಂದ ರೋಗಾಣು ಹೆಚ್ಚು ವೃದ್ಧಿಯಾಗಿ ರೋಗಬಾಧೆಯು ಶೀಘ್ರವಾಗಿ ಹರಡಿ ಕೆಲವೇ ದಿನಗಳಲ್ಲಿ ತೀವ್ರತೆ ಜಾಸ್ತಿಯಾಗಿರುತ್ತದೆ.
   - ಹೆಚ್ಚಿನ ರೈತರ ತಾಕುಗಳಲ್ಲಿ ಪೋಷಕಾಂಶ ನಿರ್ವಹಣೆಯಲ್ಲಿ ನ್ಯೂನತೆಗಳು ಕಂಡು ಬಂದಿದ್ದು, ಹೆಚ್ಚಿನ ಸಾರಜನಕ, ಡಿಎಪಿ ಹಾಗೂ 20:20:0:13 ಬಳಕೆ ಹಾಗೂ ಪೊಟ್ಯಾಷ್ ಗೊಬ್ಬರವನ್ನು ಕಡಿಮೆ ಬಳಕೆಯಿಂದ ರೋಗದ ತೀವ್ರತೆ ಹೆಚ್ಚಾಗಿರುತ್ತದೆ.

- ರೈತರು ಮೇವಿಗಾಗಿ ಉಪಯೋಗಿಸಿದ ಬಿತ್ತನೆ ಬೀಜ ಸಾಮಾನ್ಯವಾಗಿ ಬೀಜೋಪಚಾರ ಮಾಡದಿರುವ ಹಾಗೂ ಕಳೆದ ಬಾರಿ ಬೆಳೆದ ಬೆಳೆಯ ಕಾಳನ್ನು ಅಥವಾ ಬೀಜ ಮಾರಟ ಮಳಿಗೆಯಿಂದ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿರುವ F2 ಸಂತತಿ ಬೀಜವನ್ನು ಉಪಯೋಗಿಸಿರುವುದು ರೋಗ ಉಲ್ಬಣಕ್ಕೆ ಸಹಕಾರಿಯಾಗಿರುತ್ತದೆ.

- ಉತ್ತಮ ಬೇಸಾಯ ಪದ್ಧತಿಗಳನ್ನು ಪಾಲಿಸದೇ ಇರುವುದು, ಏಕ ಬೆಳೆ ಪದ್ಧತಿ ಅಳವಡಿಕೆ ಜೊತೆಗೆ ಹೆಚ್ಚಿನ ಮಳೆ ಹಾಗೂ ತಂಪಾದ ವಾತಾವರಣ ರೋಗ ಉಲ್ಬಣಕ್ಕೆ ಕಾರಣವಾಗಿರುತ್ತದೆ ಎಂದು ವಿಜ್ಞಾನಿಗಳು ಅಭಿಪ್ರಾಯಿಸಿರುತ್ತಾರೆ.

- ರೋಗದ ಕುರಿತು ಪರಿಶೀಲನೆಗಾಗಿ ಕೃಷಿ ಮಹಾವಿದ್ಯಾಲಯ, ಹಾಸನ ಹಾಗೂ ವಿ. ಸಿ. ಫಾರಂ, ಮಂಡ್ಯ ಇಲ್ಲಿನ ವಿಜ್ಞಾನಿಗಳು ಕ್ಷೇತ್ರ ಭೇಟಿ ಕೈಗೊಂಡು ವಿವಿಧ ತಾಕುಗಳ ಮಣ್ಣು, ಬಿತ್ತನೆ ಬೀಜ ಹಾಗೂ ಎಲೆಗಳ ಮಾದರಿಗಳನ್ನು ಪರಿಶೀಲನೆಗೆ ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಲಾಗಿರುತ್ತದೆ. ವಿಶ್ಲೇಷಣೆಗೆ ಒಳಪಡಿಸಿದ ಬಿತ್ತನೆ ಬೀಜದಲ್ಲಿ ಕೇದಿಗೆ ರೋಗದ ರೋಗಾಣು ಕಂಡುಬಂದಿರುವುದಿಲ್ಲ ಎಂದು ವಲಯ ಕೃಷಿ ಸಂಶೋಧನಾ ಕೇಂದ್ರ, ವಿ. ಸಿ. ಫಾರಂ, ಮಂಡ್ಯ ವಿಜ್ಞಾನಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ರೋಗ ಬಾಧೆ ಹತೋಟಿಗೆ ಕೃಷಿ ಇಲಾಖೆಯ ವತಿಯಿಂದ ಕೆಳಕಂಡಂತೆ ಕ್ರಮಗಳನ್ನು ವಹಿಸಲಾಗಿದೆ.

1. ರೈತ ಸಂಪರ್ಕ ಕೇಂದ್ರಗಳಲ್ಲಿ ಸಹಾಯಧನದಡಿ ವಿತರಿಸುವ ಎಲ್ಲಾ ಬಿತ್ತನೆ ಬೀಜದ ಜೊತೆಗ ರೋಗ ನಿಯಂತ್ರಣದ ಕುರಿತಾದ ಕರಪತ್ರಗಳನ್ನು ಮುದ್ರಿಸಿ ರೈತರಿಗೆ ತಿಳುವಳಿಕೆ ನೀಡಲಾಗುತ್ತಿದೆ.

2. ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಬಿತ್ತನೆ ಬೀಜದ ಜೊತೆಗೆ ರೋಗ ನಿಯಂತ್ರಣದ ಕುರಿತಾದ ಕರಪತ್ರಗಳನ್ನು ಕಡ್ಡಾಯವಾಗಿ ರೈತರಿಗೆ ಹಂಚುವಂತೆ ಮಾರಾಟಗಾರರಿಗೆ ಸೂಚಿಸಲಾಗಿದೆ.

3. ಮುಂಜಾಗ್ರತಾ ಹತೋಟಿ ಕ್ರಮದ ಕುರಿತು ಕೃಷಿ ವಿಜ್ಞಾನಿಗಳ ಸಹಯೋಗದೊಂದಿಗೆ 60 ಗ್ರಾಮ ಸಭೆಗಳ ಮುಖೇನ 84,000 ರೈತರಿಗೆ ತಾಂತ್ರಿಕ ಮಾಹಿತಿಯನ್ನು ನೀಡಲಾಗಿರುತ್ತದೆ.

4. ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಕಾರ್ಯಕ್ರಮದ ಮೂಲಕ ಹಾಸನ ಜಿಲ್ಲೆಯಲ್ಲಿ ರೋಗ ನಿರ್ವಹಣೆಯ ಕುರಿತು ತಾಂತ್ರಿಕ ಮಾಹಿತಿಯನ್ನು ಸುಮಾರು 140 ಹಳ್ಳಿಗಳಲ್ಲಿ 26,730 ರೈತರಿಗೆ ನೀಡಲಾಗಿರುತ್ತದೆ.

5. ಮುಸುಕಿನ ಜೋಳ ಬೆಳೆಯಲ್ಲಿ ರೋಗ ನಿರ್ವಹಣೆಗೆ ರಾಜ್ಯದಲ್ಲಿ 52,330 ಮತ್ತು ಹಾಸನ ಜಿಲ್ಲೆಯಲ್ಲಿ 8,859 ತಾಂತ್ರಿಕ ಸಲಹೆಗಳನ್ನು ಇ-ಸ್ಯಾಪ್ ತಂತ್ರಾಂಶದ ಮೂಲಕ ರೈತರಿಗೆ ಒದಗಿಸಲಾಗಿರುತ್ತದೆ.

6. ಸಹಾಯಧನದಡಿ ವಿತರಿಸುವ ಖಾಸಗಿ ಸಂಸ್ಥೆಗಳ ಬಿತ್ತನೆ ಬೀಜಗಳು ಬೀಜೋಪಚಾರಕ್ಕೆ ಒಳಪಡಿಸಿರುವ ಬಗ್ಗೆ ಕಡ್ಡಾಯವಾಗಿ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತಿದೆ.

7. ಬೂಜು ರೋಗದ ಹತೋಟಿಗೆ ಕೈಗೊಳ್ಳಬೇಕಾದ ಮುಂಜಾಗ್ರತಾ ಹಾಗೂ ನಿರ್ವಹಣಾ ಕ್ರಮಗಳ ಕುರಿತ ಮಾಹಿತಿಯನ್ನು ಕರಪತ್ರ, ಆಟೋ ಪ್ರಚಾರ, ಜಿಂಗಲ್ಸ್ ಹಾಗೂ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಮೂಲಕ ವ್ಯಾಪಕವಾಗಿ ಕೈಗೊಳ್ಳಲಾಗುತ್ತಿದೆ.

8. ಸಕಾಲದಲ್ಲಿ ರೋಗ ನಿರ್ವಹಣೆಗೆ ಸಹಾಯಧನದಡಿ ಪೀಡೆನಾಶಕಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನೀಕರಿಸಿ ಶೇ. 50 ರ ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ.

9. ರೋಗಯುಕ್ತ ಮುಸುಕಿನ ಜೋಳ ಬಿತ್ತನೆ ಬೀಜ ವಿತರಣೆ ಶಂಕಿಸಿ ಬಿತ್ತನೆ ಬೀಜ ಉತ್ಪಾದಕರು ಹಾಗೂ ವಿತರಕರನ್ನೊಳಗೊಂಡಂತೆ, 20 ಜನರ ವಿರುದ್ಧ ಹಾಸನ ನಗರ ಪೊಲೀಸ್ ಠಾಣೆಯಲ್ಲಿ FIR ದಾಖಲಿಸಲಾಗಿರುತ್ತದೆ.

10. ಬೂಜು ರೋಗ ನಿರೋಧಕ ತಳಿಗಳಾದ MAH 1137, MAH 14-5, MAH 14-138 ಮುಸುಕಿನ ಜೋಳದ ತಳಿಗಳನ್ನು ಬಳಸಲು ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ.

11. ಹೆಚ್ಚಿನ ಸಂಖ್ಯೆಯಲ್ಲಿ ಬಿಳಿ ಸುಳಿ ರೋಗ ನಿರೋಧಕ ಶಕ್ತಿಯ ತಳಿಗಳನ್ನು ಅಭಿವೃದ್ಧಿ ಪಡಿಸಿ ಬಿಡುಗಡೆ ಮಾಡಲು ಕೋರಿ ರಾಜ್ಯದ ಎಲ್ಲಾ ಕೃಷಿ ಹಾಗೂ ಸಂಬಂಧಿತ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಪತ್ರ ಬರೆಯಲಾಗಿದೆ.

12. ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ ಧಾರವಾಡ ರವರು ಈ ಕುರಿತು ವಿಜ್ಞಾನಿಗಳ ಸಭೆ ನಡೆಸಿ ತಮ್ಮ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬೂಜು ರೋಗ ಬಾಧಿತ ಪ್ರದೇಶಗಳ ಸಮೀಕ್ಷೆ ನಡೆಸಿ, ಬೂಜು ರೋಗ ನಿರ್ವಹಣೆ ಕುರಿತು ರೇಡಿಯೋ ಹಾಗೂ ಇತರೆ ಮಾಧ್ಯಮಗಳಲ್ಲಿ ಮಾಹಿತಿ ನೀಡಲು ಹಾಗೂ ಬೂಜು ರೋಗವು ಬೀಜದಿಂದ ಹರಡದೇ ಇರಲು ರೈತರು ಸ್ವಯಂ ಉಳಿಸಿದ ಬಿತ್ತನೆ ಬೀಜಗಳನ್ನು ಬಳಸದಂತೆ ಅರಿವು ಮೂಡಿಸಲು ಸೂಚನೆಗಳನ್ನು ನೀಡಿರುತ್ತಾರೆ.

13. ಹೈಟೆಕ್ ಬೀಜ ಸಂಸ್ಥೆಯವರು ಮಾರಾಟ ಮಾಡಿರುವ ಮುಸುಕಿನ ಜೋಳ ಬೀಜವು ಕಳಪೆ ಗುಣಮಟ್ಟದ್ದಾಗಿದ್ದು, ಸ್ಥಳೀಯ ರೈತರಿಂದಲೇ ಕೊಂಡುಕೊಂಡು ಬೀಜದ ಪ್ಯಾಕೆಟ್‌ಗಳನ್ನು ತಯಾರಿಸಿ ರೈತರಿಗೆ ವಿತರಣೆ ಮಾಡಲಾಗಿದೆ ಎಂದು ದೂರು ಬಂದಿರುವ ಪ್ರಯುಕ್ತ, ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರಿಗೆ ಸದರಿ ವಿಷಯದ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸಲು ಕೋರಲಾಗಿದೆ.

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

ಸಂಖ್ಯೆ: AGRI/285/ACT/2025